quickmarketreports.com

Date :16-02-2016

# ಖರೀದಿ ಬೆಂಬಲದಿಂದ ಏಲಕ್ಕಿ ದರ ಗಳಿಕೆ

ಹಿಂದಿನ ವಾರದಲ್ಲಿ ಉತ್ತಮ ಖರೀದಿ ಬೆಂಬಲದಿಂದ ಹಾಗೂ ಆವಕ ಕಡಿಮೆಯಾಗಿದ್ದುದರಿಂದ ಏಲಕ್ಕಿ ದರಗಳು ಕೇರಳ ಮತ್ತು ತಮಿಳುನಾಡಿನ ಏಲಂಗಳಲ್ಲಿ ಹೆಚ್ಚಳವಾಗಿದೆ. ದೇಶೀ ಮಾರುಕಟ್ಟೆಯಿಂದ ಕೆಲವು ವಿಚಾರಣೆಗಳು ಹಾಗೂ ರಫ್ತುದಾರರಿಂದ ಹೆಚ್ಚಿದ ಖರೀದಿ ಬೆಂಬಲದಿಂದ ಏಲಕ್ಕಿ ದರ ಹೆಚ್ಚಳವಾಗಿದೆಯೆನ್ನಲಾಗಿದೆ. ದೆಹಲಿಯನ್ನು ಬಿಟ್ಟು ಉಳಿದ ಹೆಚ್ಚಿನ ಉತ್ತರ ಭಾರತದ ಕೇಂದ್ರಗಳಿಂದ ಖರೀದಿಯಲ್ಲಿ ಆಸಕ್ತಿ ಕಂಡು ಬಂದಿತ್ತೆನ್ನಲಾಗಿದೆ. ದೆಹಲಿಯ ವರ್ತಕರು ಮಾತ್ರ ದಾಸ್ತಾನಿರುವ ನೆಪದಿಂದ ಖರೀದಿಯಲ್ಲಿ ಆಸಕ್ತಿ ವಹಿಸಿಲ್ಲ. ಈ ಸೀಸನ್‌ನ ಕಟಾವು ಈ ತಿಂಗಳಲ್ಲಿ ಅಂತ್ಯವಾಗಲಿದೆಯೆನ್ನಲಾಗಿದೆ. ರಫ್ತುದಾರರು ಮಾರುಕಟ್ಟೆಯಲ್ಲಿ ಚಟುವಟಿಕೆಯಿಂದಿದ್ದು ಸುಮಾರು 80 ರಿಂದ 100 ಟನ್ ಏಲಕ್ಕಿ ಖರೀದಿ ಮಾಡಿದರೆನ್ನಲಾಗಿದ್ದು, ರಫ್ತು ಗುಣಮಟ್ಟದ ಆವಕ ಕಡಿಮೆಯಿತ್ತೆನ್ನಲಾಗಿದೆ. ಈ ವರ್ಷ ಉತ್ತಮ ಬೆಳೆಯಾದುದರಿಂದ ಗಿಡಗಳಲ್ಲಿ ಏಲಕ್ಕಿ ಕಾಳು ಹೆಚ್ಚಳವಿದ್ದುದರಿಂದ ಕ್ಯಾಪ್ಸೂಲ್ ವರ್ಗದ ಏಲಕ್ಕಿ ತಾತ್ರ ಕಿರಿದಾಗಿದೆಯೆನ್ನಲಾಗಿದೆ. ಇದರಿಂದ ದರದ ಮೇಲೂ ಪರಿಣಾಮ ಉಂಟಾಗಿದೆಯೆನ್ನಲಾಗಿದೆ. ಆದರೂ ಉತ್ತಮ ಗುಣಮಟ್ಟ ಹಾಗೂ ಉತ್ತಮ ಬಣ್ಣದ ಏಲಕ್ಕಿ ದರ ಉತ್ತಮವಾಗಿದೆಯೆನ್ನಲಾಗಿದ್ದು ಅದರ ಲಭ್ಯತೆ ಕಡಿಮೆಯೆನ್ನಲಾಗಿದೆ. ಹಿಂದಿನ ವಾರ 648 ಟನ್ ಏಲಕ್ಕಿ ಆವಕವಾಗಿದ್ದು ಅದಕ್ಕೂ ಹಿಂದಿನ ವಾರ 768 ಟನ್ ಆವಕವಾಗಿದೆಯೆನ್ನಲಾಗಿದೆ. ವೈಯಕ್ತಿಕ ಸರಾಸರಿ ದರ ರೂ.10–20 ಹೆಚ್ಚಳವಾಗಿದ್ದು ದರ 1 ಕೆ.ಜಿ. ಗೆ ರೂ.525 ಹಾಗೂ 515 ರ ತನಕ ಇತ್ತೆನ್ನಲಾಗಿದೆ. 15–2–2016ರ ಸಂಥನಪಾರ, ಬೋಡಿನಾಯಕನ್ನೂರ್ ಏಲಕ್ಕಿ ಪ್ಲಾಂಟರ್ಸ್ ಎಸೋಸಿಯೇಶನ್‌ನ ಏಲಂನ ಆವಕ 52.8 ಟನ್‌ಗಳಿಗೆ ಹೆಚ್ಚಳವಾಗಿತ್ತು. ಹಾಗೂ ಹೆಚ್ಚಿನೆಲ್ಲಾ ಏಲಕ್ಕಿ ಸರಾಸರಿ ದರ 1 ಕೆ.ಜಿ.ಗೆ ರೂ.534.98ರಿಂದ 529.14 ವರೆಗೆ ಇತ್ತೆನ್ನಲಾಗಿದೆ. ಈ ಸೀಸನ್‌ನಲ್ಲಿ ಒಟ್ಟು ಆವಕ ಫೆಬ್ರವರಿ 13ರ ತನಕ 20580 ಟನ್‌ಗಳಾಗಿದ್ದು 19860 ಟನ್ ಮಾರಾಟವಾಗಿದೆಯೆನ್ನಲಾಗಿದೆ. 8 ಎಂಎಂ ಹಸಿರು ಬಣ್ಣದ ಏಲಕ್ಕಿ 1 ಕೆ.ಜಿ.ಗೆ ರೂ.900–950, 7–8 ಎಂಎಂ. ರೂ.720–730, 6–7 ಎಂಎಂ ರೂ.590–600, 6 ಎಂಎಂ ಗಿಂತ ಕೆಳಮಟ್ಟದ್ದು ರೂ.550–560ರ ದರದಲ್ಲಿ 15/2ರಂದು ಮಾರಾಟವಾಗಿದೆಯೆನ್ನಲಾಗಿದೆ.